# ಡಸ್ಟರ್ ಎಂಬ eರೇಸರ್ರು

ಸುಮಾ ರಮೇಶ್
ಕಲೆ: ಸಂತೋಷ್ ಸಸಿಹಿತ್ಲು



'ಯಾರ್ಯಾರ ಮನೇಲಿ ಹೊಲಿಗೆ ಮಿಷಿನ್ ಇದೆ ಕೈ ಎತ್ತಿ...'

'ಸಾರ್... ಸಾರ್...' ಎಂದು ಏಳೆಂಟು ಕೈಗಳು ಧ್ವಜಾರೋಹಣದ ಪೋಲ್‌ಗಳಂತೆ ಮೇಲೆದ್ದರೆ, ಮೂರ್ನಾಲ್ಕು ಕೈಗಳೊಂದಿಗೆ ಕಾಯಗಳೂ ಅರ್ಧಂಬರ್ಧ ಮೇಲೆದ್ದು ಸ್ಪೆಷಲ್ ಅಟೆಂಷನ್‌ಗೆ ತೆರೆದುಕೊಳ್ಳುತ್ತಿದ್ದವು.

'ಸರಿ, ನಾಳೆ ನಿಮ್ಮಲ್ಲೇ ಯಾರಾದ್ರೂ ಒಬ್ರು ಒಳ್ಳೆ ಡಸ್ಟರ್ ಹೊಲುಸ್ಕೊಂಡ್ಬನ್ನಿ...'

ಇದು ನಾಲ್ಕು ದಶಕಗಳ ಹಿಂದೆ ನಾವು ಪ್ರೈಮರಿ ಶಾಲೆಯಲ್ಲಿದ್ದಾಗ ವರ್ಷಕ್ಕೊಮ್ಮೆಯಾದರೂ ಕಾಣಸಿಗುತ್ತಿದ್ದ ಚಿತ್ರಣ.

ಕಪ್ಪುಹಲಗೆಯ ಮೇಲೆ ಬೆಳ್ಳಗಿನ ಚಾಕ್‌ಪೀಸ್‌ನಿಂದ ಮೇಷ್ಟ್ರುಗಳು ಕರಕರನೆ ತಮ್ಮ ಶ್ವೇತಾಕ್ಷರಗಳನ್ನು ದಾಖಲಿಸಿ ನಂತರ ಡಸ್ಟರ್ ಎಂಬ ಕೈ ದಿಂಬಿನಂತಹ ಬಟ್ಟೆಯ ಸಾಧನದಿಂದ ಒರೆಸಿದರೆ ಚಾಕ್ ಡಸ್ಟ್ ಯಾನೆ ಸುಣ್ಣದ ಪುಡಿ ಫೌಂಟನ್‌ನಂತೆ ಸುತ್ತಲೂ ಚಿಮ್ಮುತ್ತಿತ್ತು. ಹೇರ್ ಡೈ ಎಂಬ ಪ್ರಸಾಧನ ಹೆಚ್ಚು ಪ್ರಚಲಿತವಾಗಿರದಿದ್ದ ಆ ದಿನಗಳಲ್ಲಿ ಪ್ರಾಯ ದಾಟಿದ ಮೇಷ್ಟ್ರುಗಳ ಬೆಳ್ಳಿ ಕೂದಲುಗಳ ಮಧ್ಯೆ ಇಣುಕುತ್ತಿದ್ದ ಯೌವನಸೂಚಕ ಕರಿ ಕೂದಲುಗಳನ್ನೂ ಈ ಸೀಮೆಸುಣ್ಣದ ಪುಡಿ ಸಂಪೂರ್ಣವಾಗಿ ಕವರ್ ಮಾಡಿ ಸಮಾನತೆಯ ಸೊಬಗನ್ನು ಸಾರುತ್ತಿತ್ತು. ಪುಡಿ ಸಂಸ್ಕಾರ ಪ್ರಕ್ರಿಯೆಯಲ್ಲಿ ಮಿಂದ ಕೇಶದೊಂದಿಗೆ **male** ತುಟಿಯ ಪೌರುಷ ಸೂಚಕ ಗಿರಿಜಾಮೀಸೆಯ ಮೇಲೂ ಇದು ತನ್ನ ಕೈಚಳಕ ತೋರಿ, ಬೆಳ್ಳಗಿನ ಗೀರುಗಳನ್ನು ಮೂಡಿಸಿದಾಗ ಮಕ್ಕಳು ಮುಸಿಮುಸಿ ನಕ್ಕರೆ ಅವೇ ಡಸ್ಟರ್‌ಗಳು ರಭಸದಿಂದ ಏರ್ ಮಿಸೈಲ್‌ಗಳಂತೆ ಬಂದೆರಗುತ್ತಿದ್ದವು. ನಕ್ಕ ಮಕ್ಕಳ ಮೈಯೆಲ್ಲಾ ಮಿಸೈಲ್ ಹೊಡೆತಕ್ಕೆ ಡಸ್ಟಾವೃತವಾಗಿ ಎದೆಯೊಳಗೆ ಹುದುಗಿ ಕುಳಿತಿದ್ದ ಹಳೆಯ ಗೂರಲು ಜಾಗೃತಗೊಂಡು ಕಾವ್... ಕಾವ್... ಎನ್ನುತ್ತಾ ಅವರ ಪುಟ್ಟ ದೇಹ ನಿಗುರಿ ನಿಂತರೆ, ಅಕ್ಕಪಕ್ಕದ ಮಕ್ಕಳು ಉರುಳಾಡಿಕೊಂಡು ನಗುತ್ತಿದ್ದರು. ದೂಳು ಕೊಡವಿ ಬಿದ್ದು ಮಗ್ಗುಲಾದ ಮಿಸೈಲನ್ನು ಮೇಷ್ಟ್ರಿಗೆ ತಲುಪಿಸಲು ನಾಮುಂದು ತಾಮುಂದು ಎಂದು ಮಕ್ಕಳು ನಗುತ್ತಲೇ ಮುಗಿಬೀಳುತ್ತಿದ್ದರು.

ಮರುದಿನವೇ ಕೈ ಮೇಲೆತ್ತಿದ್ದ ಅಷ್ಟೂ ಮಕ್ಕಳ ಮನೆಯ ಹೊಲಿಗೆ ಮಿಷನ್‌ನಲ್ಲಿ ಕಲಾತ್ಮಕವಾದ ಡಸ್ಟರ್‌ಗಳು ಸಿದ್ಧಗೊಂಡು ಶಾಲೆಯ ಮೆಟ್ಟಿಲೇರುತ್ತಿದ್ದವು. ಕೆಲವು ಚೌಕಾಕಾರವಾಗಿದ್ದರೆ, ಮತ್ತೆ ಕೆಲವು ಆಯತಾಕಾರ. ಕೆಲವೊಮ್ಮೆ ರೌಂಡ್ ಶೇಪಿನ ಡಸ್ಟರ್‌ಗಳೂ ಬಂದಿಳಿಯುತ್ತಿದ್ದವು. ಕೆಲವು ತಮ್ಮ ಉತ್ಕೃಷ್ಟತೆಯನ್ನು ಸಾರಲು ಗಾತ್ರವನ್ನು ಹಿಗ್ಗಿಸಿಕೊಂಡು ತಲೆದಿಂಬಿನಷ್ಟೇ ದೊಡ್ಡದಾಗಿರುತ್ತಿದ್ದವು. ಅವುಗಳಿಂದ ಬೋರ್ಡ್ ಒರೆಸಲು ಎರಡು ಕೈಗಳನ್ನೂ ಬಳಸಬೇಕಿತ್ತು. ಇನ್ನು ಕೆಲವು ಡಸ್ಟರ್‌ಗಳಿಗೆ ಪಟ್ಟಿಯಂತಹ ಗ್ರಿಪ್ ಸೌಲಭ್ಯ ಇರುತ್ತಿತ್ತು. ಈ ಎಕ್ಸ್‌ಟ್ರಾ ಫಿಟ್ಟಿಂಗ್ ಒಳಗೆ ಕೈ ತೂರಿಸಿ ಕಂಫರ್ಟೆಬಲ್ ಆಗಿ ಒರೆಸಬಹುದಿತ್ತು. ಹಲವಕ್ಕೆ ಸುತ್ತಲೂ ಕಲಾತ್ಮಕವಾದ ಫ್ರಿಲ್‌ಗಳು ಮೂಡಿ ಅವು ಫೀಮೇಲ್ ಡಸ್ಟರ್‌ಗಳೇನೋ ಎಂಬ ಫೀಲ್ ಮೂಡಿಸುತ್ತಿದ್ದವು. ಒಟ್ಟಾರೆ ಪೋಷಕರು ಡಸ್ಟರ್ ತಯಾರಿಕೆಯಲ್ಲಿ ತಮ್ಮ ಸೃಜನಶೀಲತೆ ಮೆರೆಯುತ್ತಿದ್ದರು. ಮೇಷ್ಟ್ರು ಡಸ್ಟರ್‌ಗಳನ್ನೂ ಪರಿಶೀಲಿಸಿ ಮೆಚ್ಚುಗೆ ಸೂಚಿಸಿದಾಗ ತಂದ ಮಕ್ಕಳು ಧನ್ಯರಾಗುತ್ತಿದ್ದರು.

ಹೊಲಿಗೆ ಮಿಷನ್ ಇಲ್ಲದವರ ಮನೆಯ ಮಕ್ಕಳು ತಾವೂ ಡಸ್ಟರ್ ಹೊಲೆದು ತರಲು ಉತ್ಸುಕರಾಗಿ ಸೂಜಿ–ದಾರ ಬಳಸಿ ಟಾಕಾ ಹಾಕಿ, ಚಚ್ಚೌಕದ ಬಟ್ಟೆಯನ್ನು ಸಿದ್ಧಪಡಿಸಿ ಅದರೊಳಗೆ ತುಂಬಲು ಚಿಂದಿ ಬಟ್ಟೆ ಸಿಗದಿರಲು ಕಾಗದದ ಚೂರುಗಳು, ಮರದ ಹೊಟ್ಟನ್ನು ತುಂಬಿಸಿ ಟಾಕಾದಲ್ಲೇ ಸೀಲ್ ಮಾಡಿ ತರುತ್ತಿದ್ದರು. ಅವು ನೋಡಲು ಮೋಚಿ ಹೊಲೆದ ಹರಿದ ಮೆಟ್ಟಿನಂತಿದ್ದು, ಒರೆಸಲು ಹೋದರೆ ಚಾಕ್ ಡಸ್ಟಿನೊಂದಿಗೆ ಟಾಕಾದ ಸಂದಿಯಿಂದ ಹೊರಟ ಹೊಟ್ಟಿನ ಡಸ್ಟೂ ಜೊತೆಗೂಡಿ ಬೋರ್ಡ್ ಅಡಿಯಲ್ಲಿ ಸಮ್ಮಿಶ್ರ ಸರ್ಕಾರದಂತೆ ಎರಡು ಬ(ಣ)ಣ್ಣದ ದೂಳನ್ನೂ ಕಾಣಬಹುದಿತ್ತು.

ಬೋರ್ಡ್ ಒರೆಸುವ ಕೆಲಸ ಕೆಲವೊಮ್ಮೆ ಕ್ಲಾಸ್ ಲೀಡರ್ ಪಾಲಿಗೆ. ಇದು ಸಾಮಾನ್ಯವಾಗಿ ಬೆಳಿಗ್ಗೆ ಹಾಗೂ ಮಧ್ಯಾಹ್ನ ಮೊದಲ ಪಿರಿಯಡ್‌ನ ಕಾಯಕ. ಲೀಡರ್‌ಗಳು ಅದನ್ನು ಒಂದು ಪ್ರೆಸ್ಟೀಜಿಯಸ್ ಕಾರ್ಯ ಎಂಬಂತೆ ಪರಿಗಣಿಸಿ, ಎಟುಕಲಾರದ ಬೋರ್ಡ್ ಬದಿ ಸ್ಟೂಲ್ ಇರಿಸಿ, ಒಂದಿಬ್ಬರು ಆಪ್ತರನ್ನು ಅಸಿಸ್ಟೆಂಟ್‌ಗಳಾಗಿ ನೇಮಿಸಿಕೊಂಡು ಬೋರ್ಡನ್ನು ಶುಚಿಗೊಳಿಸಿ, ದೂಳು ತುಂಬಿದ ಡಸ್ಟರ್ ಅನ್ನು ಹೊರಗೆ ಕೊಂಡೊಯ್ದು ಬಡಿದು ಬಡಿದು ಡಸ್ಟ್ ಫ್ರೀ ಮಾಡುತ್ತಿದ್ದರು. ಕ್ಲಾಸ್ ಲೀಡರ್‌ಗೆ ಅಸಿಸ್ಟ್ ಮಾಡುವ ಸಹಾಯಕರಿಗೆ ಶಾಸಕರ ಪಿಎಗಳಷ್ಟೇ ಬೇಡಿಕೆ ಇರುತ್ತಿತ್ತು. ಮೇಷ್ಟ್ರುಗಳ ಗೈರು ಹಾಜರಿಯಲ್ಲಿ ಮಾತನಾಡಿದವರ ಹೆಸರು ಬರೆಯುವ ವಿಷಯದಲ್ಲಿ ಸಾಕಷ್ಟು ಪಕ್ಷಪಾತ, ಗೋಲ್‌ಮಾಲ್ ನಡೆದು ಈ ಅಸಿಸ್ಟೆಂಟ್‌ಗಳೂ